ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಮಹಾ ನಿರ್ದೇಶಕರು
ಕರ್ನಾಟಕ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು
ನಿರ್ವಹಣಾ ಪಡೆಯ ನಿರ್ದೇಶನಾಲಯ
ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 25570733
22971501
ಫ್ಯಾಕ್ಸ್ : 22971512

ಸಂಖ್ಯೆ:ಜಿಬಿಸಿ(1)420/2014 12-10-2018

ಗೆ,

**ಆಯುಕ್ತರು,**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,**
**ಎನ್.ಆರ್.ಚೌಕ,**
**ಬೆಂಗಳೂರು – 560 002.**

ಮಾನ್ಯರೆ,

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.195/1 ರಲ್ಲಿ ನಿರ್ಮಿಸಿರುವ ಬಹುಮಹಡಿ ವಸತಿ ಕಟ್ಟಡಗಳಿಗೆ ಸ್ವಾಧೀನತೆ ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1)ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ.ಜಿಬಿಸಿ(1)420/2014 ದಿನಾಂಕ 10-11-2014.
2) ಮೆ: ಎಸ್‌ಎಸ್‌ವಿಆರ್ ಬಿಲ್ಡರ್ಸ್, ಬೆಂಗಳೂರು ರವರ ಪತ್ರ ದಿನಾಂಕ 19-01-2018.

<<<<<<>>>>>>>

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.195/1ರಲ್ಲಿ 26.40 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 8 ಮೇಲಂತಸ್ತುಗಳನ್ನು ಹೊಂದಿರುವ 2 ವಿಂಗ್‌ಗಳ (ವಿಂಗ್-ಎ & ಬಿ) ಬ್ಲಾಕ್-ಎ ಮತ್ತು 26.40 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 8 ಮೇಲಂತಸ್ತುಗಳನ್ನು ಹೊಂದಿರುವ 2 ವಿಂಗ್‌ಗಳ (ವಿಂಗ್-ಸಿ & ಡಿ) ಬ್ಲಾಕ್-ಬಿ ಬಹುಮಹಡಿ ವಸತಿ ಕಟ್ಟಡ ನಿರ್ಮಿಸಲು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ 10-11-2014 ರಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

ಪ್ರಸ್ತುತ ಕಟ್ಟಡದ ನಿರ್ಮಾಪಕರಾದ ಮೆ: ಎಸ್‌ಎಸ್‌ವಿಆರ್ ಬಿಲ್ಡರ್ಸ್, ಬೆಂಗಳೂರು ರವರು, ತಮ್ಮ ಉಲ್ಲೇಖಿತ ಪತ್ರದಲ್ಲಿ ಸದರಿ ಕಟ್ಟಡಗಳ ನಿರ್ಮಾಣ ಹಾಗೂ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿರುತ್ತಾರೆ.

ಕಟ್ಟಡ ನಿರ್ಮಾಪಕರ ಕೋರಿಕೆಯಂತೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ದಿನಾಂಕ 17-02-2018 ರಂದು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.195/1ರಲ್ಲಿ ನಿರ್ಮಿಸಿರುವ ಬಹುಮಹಡಿ ವಸತಿ ಕಟ್ಟಡಗಳನ್ನು ನಿರೀಕ್ಷಣೆ ಮಾಡಿ, ಕಟ್ಟಡ ನಿರ್ಮಾಪಕರು 26.40 ಮೀಟರ್‌ನಿಂದ 26.90 ಮೀಟರ್‌ಗೆ ಹೆಚ್ಚಿಸಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ನಿರಾಕ್ಷೇಪಣಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಟಾನಗೊಳಿಸಿರುವುದಾಗಿ ತಿಳಿಸಿ, ಹಾಗೂ ಕಟ್ಟಡದಲ್ಲಿನ ನೌಕರರು/ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸ್ವಾಧೀನತೆಯ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಆದ್ದರಿಂದ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.195/1ರಲ್ಲಿ ನಿರ್ಮಿಸಿರುವ **26.90 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 8 ಮೇಲಂತಸ್ತುಗಳನ್ನು ಹೊಂದಿರುವ 2 ವಿಂಗ್‌ಗಳ (ವಿಂಗ್-ಎ & ಬಿ) ಬ್ಲಾಕ್-ಎ ಮತ್ತು 26.90 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 8 ಮೇಲಂತಸ್ತುಗಳನ್ನು ಹೊಂದಿರುವ 2 ವಿಂಗ್‌ಗಳ (ವಿಂಗ್-ಸಿ & ಡಿ) ಬ್ಲಾಕ್-ಬಿ ಬಹುಮಹಡಿ ವಸತಿ ಕಟ್ಟಡಗಳಿಗೆ** ಸ್ವಾಧೀನತೆ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ ಜಿಬಿಸಿ(1)420/2014 ದಿನಾಂಕ 10-11-2014 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು, ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸ್ವಾಧೀನತಾ ಪ್ರಮಾಣ ಪತ್ರ ನೀಡಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಯಾವ ಆಕ್ಷೇಪಣೆ ಇಲ್ಲವೆಂದು ತಿಳಿಸಿದೆ.

**ಕಟ್ಟಡ ನಿರ್ಮಾಪಕರು ದಿನಾಂಕ 04-08-2018 ರಂದು ಒಪ್ಪಿರುವಂತೆ ಸಲ್ಲಿಸಿರುವ ಮುಚ್ಚಳಿಕೆ ಪತ್ರದಂತೆ ಕಟ್ಟಡದಲ್ಲಿನ ಶೇಕಡಾ 40 ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡಮಿಯಲ್ಲಿ ಸೂಕ್ತ ತರಬೇತಿಯನ್ನು 6 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿಗೊಳಪಟ್ಟಿದೆ.**

**ಈ ಕ್ಲಿಯರೆನ್ಸ್ ಪತ್ರ ಪಡೆದ ದಿನಾಂಕದಿಂದ ಒಂದು ವರ್ಷದ ಒಳಗೆ ರಾಷ್ಟ್ರೀಯ ಕಟ್ಟಡ ಸಂಹಿತೆ ನಿಯಮ ಸಿ.1.8 ಪ್ರಕಾರ Compartmentation,** ಸಿ.1.6 ರ ಪ್ರಕಾರ **Smoke exhaust,** 4.10.2 ರ ಪ್ರಕಾರ **pressurization areas below ground, Ventilation** ಮತ್ತು 4.15.1 ರ ಪ್ರಕಾರ ಫೈರ್ ಲಿಫ್ಟ್ **(Fire fighting lift should be provided with a ceiling hatch for use incase of emergency, so that when the car gets stuck up, it shall be easily openable)** ಕ್ರಮಗಳನ್ನು ಮತ್ತು **ಅವಶ್ಯವಿರುವ ಸೂಕ್ತ ಅಗ್ನಿನಂದಕಗಳನ್ನು ಅಳವಡಿಸಬೇಕೆಂದು ಹಾಗೂ ರಾಷ್ಟ್ರೀಯ ಕಟ್ಟಡ ಸಂಹಿತೆಯ ಇತರೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ.**

**ಅಲ್ಲದೆ ಸದರಿ ಕಟ್ಟಡಗಳ ಅವರಣದ ಯಾವುದೇ ಭಾಗದಲ್ಲಿ ಎಲ್‌ಪಿಜಿ ಅಥವಾ ಹೆಚ್‌ಎಸ್‌ಡಿ ಇತ್ಯಾದಿಗಳನ್ನು ಶೇಖರಣೆ ಮಾಡಲು ಉದ್ದೇಶಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯತಕ್ಕದ್ದು.**

**ಈ ಕ್ಲಿಯರೆನ್ಸ್ ಪತ್ರವು ಸರ್ಕಾರಿ ಆದೇಶ ಸಂ. ಒಇ 33 ಕಅಸೇ 2011 ದಿನಾಂಕ 07-07-2011 ರಂತೆ, ಈ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಕ್ಲಿಯರೆನ್ಸ್ ಪತ್ರವನ್ನು ದಿನಾಂಕ 12-10-2020 ರೊಳಗೆ ನವೀಕರಿಸುವಂತೆ ತಿಳಿಸಲಾಗಿದೆ.**

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಕಟ್ಟಡದಲ್ಲಿ ಇಲಾಖಾ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನದ ಉಪಕರಣಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ **ಕಾನೂನಿನ್ವಯ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಅಥವಾ ಕಟ್ಟಡದಲ್ಲಿ ಯಾವುದೇ ಹೆಚ್ಚುವರಿ** ನಿರ್ಮಾಣ **ಮಾಡಿದರೆ**, ಅಥವಾ ಯಾವುದೇ ರೀತಿ ಖಾಯಂ/ತಾತ್ಕಾಲಿಕ ಅಡಚಣೆಗಳನ್ನುಂಟು ಮಾಡಿದರೆ ಹಾಗೂ **ಮೇಲೆ ವಿವರಿಸಲಾದ ಬಾಕಿ ಉಳಿದಿರುವ ಶಿಫಾರಸ್ಸುಗಳನ್ನು ಮುಚ್ಚಳಿಕೆ ಪತ್ರದಲ್ಲಿ ಒಪ್ಪಿಕೊಂಡಂತೆ ಅಳವಡಿಸದಿದ್ದರೆ,** ಈ ಕ್ಲಿಯರೆನ್ಸ್ ಪತ್ರ ಅನೂರ್ಜಿತ ಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತಮ್ಮ ವಿಶ್ವಾಸಿ,

**ಪೊಲೀಸ್ ಮಹಾ ನಿರ್ದೇಶಕರು**
**ಹಾಗೂ ಮಹಾ ನಿರ್ದೇಶಕರು**
**ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.**

ಪ್ರತಿ:

1) ಮೆ: ಎಸ್ಎಸ್‌ವಿಆರ್ ಬಿಲ್ಡರ್ಸ್ ನಂ.52, 53 & 54, ಕೈತೋಟ, ವೈಟ್‌ಫೀಲ್ಡ್ ಅಂಚೆ, ಬೆಂಗಳೂರು – 560 056.
2) ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪೂರ್ವ ವಲಯ.